ಮಧ್ಯಂತರ ಅರ್ಜಿ **13** ಮತ್ತು **14** ರ ಮೇಲಿನ ಆದೇಶದಂತೆ ದಿನಾಂಕಃ **28.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದಃ

ಕ್ರಯದ ಮಾತು-ಕತೆ ನಡೆದ ದಿನಾಂಕದಂದು ಬಸವರಾಜ ವಕೀಲರು, ಕುರಿ ಮಲ್ಲಪ್ಪ, ಶಂಕರಪ್ಪ, ನಿಂಗಪ್ಪ ಇವರೆಲ್ಲಾ ಇದ್ದರು ಎಂದರೆ ಎಚ್. ನಿಂಗಪ್ಪ ಬಿನ್ ಬಸಪ್ಪ ಮತ್ತು ಬಸವರಾಜ ವಕೀಲರು ಮಾತ್ರ ಇದ್ದರು. ಸದರಿ ದಿನಾಂಕದಂದು ಶಂಕರಪ್ಪ ಮತ್ತು ಕುರಿ ಮಲ್ಲಪ್ಪ ಕೂಡ ಹಾಜರಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಇನಾಂ ಜಮೀನು ಎಂದರೆ ಸರಿಯಲ್ಲ. ನಿಪಿ3 ಪಹಣಿಯ ಕಾಲಂ ನಂ. 10 ರಲ್ಲಿ ಇನಾಮ್ ಎಂದು ನಮೂದಾಗಿದೆ ಎಂದರೆ ಸರಿ. ನಾನು ಪ್ರತಿವಾದಿಯ ಮೂಲಕ ಅರ್ಜಿ ತುಂಬಿಸಿ ಫಾರ್ಮ್ ನಂ. 2 ನ್ನು ಪಡೆದುಕೊಂಡಿದ್ದುಂಟೇ? ಎಂದರೆ ಪಡೆದಿಲ್ಲ. ಕರಾರು ಮಾಡಿಕೊಳ್ಳುವ ಮುಂಚೆ ನನಗೆ ದಾವಾ ಸ್ವತ್ತು ಇನಾಂ ಜಮೀನು ಎಂದು ಗೊತ್ತಿತ್ತು ಎಂದರೆ ಗೊತ್ತಿತ್ತು, ಪ್ರತಿವಾದಿಯು ಆತನೇ ಇನಾಂ ಎಂಬುದನ್ನು ಹೊಡೆದು ಹಾಕಿಸಿ ಕೊಡುತ್ತೇನೆ ಎಂದು ಹೇಳಿದ್ದರು. ಪ್ರತಿವಾದಿಯು ನಮೂನೆ-2 ನ್ನು ಪಡೆದು ಇನಾಂ ಎಂಬುದನ್ನು ರದ್ದುಪಡಿಸಿದ ನಂತರ ಕರಾರು ಬರೆದುಕೊಟ್ಟನೇ? ಎಂದರೆ ಇಲ್ಲ, ನಮೂನೆ-2 ನ್ನು ಪಡೆಯುವ ಮುಂಚೆಯೇ ಕರಾರು ಬರೆದು ಕೊಟ್ಟಿದ್ದಾರೆ. ದಾವಾ ಸ್ವತ್ತು ಇನಾಂ ಜಮೀನು ಆಗಿರುವ ಕಾರಣ ಅದು ಸರ್ಕಾರಿ ಸ್ವತ್ತಾಗಿದ್ದು, ಪ್ರತಿವಾದಿಯು ನನಗೆ ಯಾವುದೇ ಕರಾರು ಬರೆದುಕೊಡಲು ಅವಕಾಶವಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿನ ಕಾಲಂ ನಂ. 10 ರಲ್ಲಿರುವ ಇನಾಂ ದಾಖಲಾತಿಯನ್ನು ರದ್ದುಪಡಿಸದ ಹೊರತು ಪ್ರತಿವಾದಿಯು ನನಗೆ ಕ್ರಯ ಪತ್ರ ಬರೆದುಕೊಡಲು ಅವಕಾಶವಿಲ್ಲ ಎಂದರೆ ನನಗೆ ತುರ್ತಾಗಿ ಹಣದ ಅವಶ್ಯಕತೆ ಇದೆ, ನಂತರ ಇನಾಂ ನಮೂದಾತಿ ರದ್ದುಪಡಿಸಿ ಕೊಡುತ್ತೇನೆ ಎಂದು ಹೇಳಿ ಕರಾರು ಬರೆದುಕೊಟ್ಟಿದ್ದಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯಿಂದ ರೂ. 1 ಲಕ್ಷ ಸಾಲಕ್ಕೆ ಭದ್ರತೆಗಾಗಿ ಕ್ರಯದ ಕರಾರು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ನಾನು ಹೇಳುತ್ತೇನೆ, ರೂ. 5 ಲಕ್ಷ ಕೊಟ್ಟಿದ್ದೇನೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನಾಂ ಜಮೀನನ್ನು ನಾನು ಯಾವುದೇ ರೀತಿಯಲ್ಲಿ ಕ್ರಯ ಮಾಡಲು, ಕರಾರು ಮಾಡಿಕೊಳ್ಳಲು ಮತ್ತು ಸಾಲ ಕೊಡಲಿಕ್ಕೆ ಕೂಡ ಬಳಸಲು ಅವಕಾಶವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನನ್ನ ಪರವಾಗಿ ಕರಾರು ಮಾಡಿಕೊಡಲು ಮತ್ತು ನನಗೆ ಪ್ರತಿವಾದಿಯಿಂದ ಕರಾರು ಪಡೆದುಕೊಳ್ಳಲು ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.

ಮಧ್ಯಂತರ ಅರ್ಜಿ **13** ಮತ್ತು **14** ರ ಮೇಲಿನ ಆದೇಶದಂತೆ ದಿನಾಂಕಃ **28.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದಃ

ನಾನು ವಕೀಲ ವೃತ್ತಿ ಮಾಡುತ್ತೇನೆ ಎಂದರೆ ಸರಿ. ದಾವಾ ಸ್ವತ್ತು ಇನಾಂ ಜಮೀನು ಎಂದರೆ ನನಗೆ ಗೊತ್ತಿಲ್ಲ. ನಾನು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡುವ ಮುಂಚೆ ದಾವಾ ಸ್ವತ್ತಿನ ಪಹಣಿ ಮತ್ತು ಇತರೆ ದಾಖಲೆಗಳನ್ನು ನೋಡಿಯೇ ಸಾಕ್ಷಿ ಸಹಿ ಮಾಡಿದ್ದೆ ಎಂದರೆ ಸರಿ. ನಿಪಿ3 ಪಹಣಿಯ ಕಾಲಂ ನಂ. 10 ರಲ್ಲಿ ಇನಾಂ ಜಮೀನು ಎಂದು ನಮೂದಾಗಿದೆ ಎಂದರೆ ನಾನು ಅದನ್ನು ಗಮನಿಸಿಲ್ಲ. ನಾನು ಇನಾಂ ಜಮೀನು ಎಂಬುದನ್ನು ನೋಡಿಯೇ ಕ್ರಯದ ಕರಾರು ಮಾಡಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಫಾರ್ಮ್ ನಂ. 2 ನ್ನು ನನ್ನ ಕೈಗೆ ಕೊಟ್ಟಿರಲಿಲ್ಲ, ವಾದಿಗೆ ಫಾರ್ಮ್ ನಂ. 2 ನ್ನು ಪ್ರತಿವಾದಿ ಕೊಟ್ಟಿದ್ದನ್ನು ನಾನು ನೋಡಿಲ್ಲ. ದಾವಾ ಸ್ವತ್ತು ಇನಾಂ ಜಮೀನು ಆಗಿರುವ ಕಾರಣ ಪ್ರತಿವಾದಿಗೆ ಅದರ ಕುರಿತು ಕ್ರಯದ ಕರಾರು ಬರೆದುಕೊಡಲು ಮತ್ತು ವಾದಿಗೆ ಕ್ರಯದ ಕರಾರು ಪತ್ರ ಬರೆಯಿಸಿಕೊಳ್ಳಲು ಹಕ್ಕು ಇಲ್ಲ ಎಂದರೆ ಪ್ರತಿವಾದಿ ಕೂಡ ಕಾನೂನು ಪದವೀಧರನೇ ಇರುತ್ತಾರೆ. ಪ್ರತಿವಾದಿ ಕಾನೂನು ಪದವೀಧರನಲ್ಲ ಎಂದರೆ ರಾಣೆಬೆನ್ನೂರು ಕಾನೂನು ಕಾಲೇಜಿನಲ್ಲಿ ಪ್ರತಿವಾದಿಯು ನನಗೆ ಸೀನಿಯರ್ ಆಗಿದ್ದರು. ಪ್ರತಿವಾದಿ ಕಾನೂನು ಪದವಿ ಪೂರ್ಣಗೊಳಿಸಿಲ್ಲ ಎಂದರೆ ಅದರ ಬಗ್ಗೆ ಗೊತ್ತಿಲ್ಲ. ಪ್ರತಿವಾದಿಯು ವಾದಿಯಿಂದ ರೂ. 1 ಲಕ್ಷ ಸಾಲ ಪಡೆದು ಅದರ ಭದ್ರತೆಗಾಗಿ ಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಎಂದರೆ ರೂ. 6 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ರೂ. 5 ಲಕ್ಷ ಮುಂಗಡ ಪಡೆದು ಕರಾರು ಪತ್ರ ಬರೆದುಕೊಟ್ಟಿದ್ದಾರೆ. ವಾದಿಯು ನನಗೆ ಸುಮಾರು 15-20 ವರ್ಷಗಳಿಂದ ಪರಿಚಯಸ್ಥ ಮತ್ತು ಆತ್ಮೀಯನೆಂದರೆ ವಾದಿಯು ನನಗೆ ಸುಮಾರು 5-6 ವರ್ಷಗಳಿಂದ ಮಾತ್ರ ಪರಿಚಯಸ್ಥ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಗೆ ರೂ. 5 ಲಕ್ಷ ಹಣ ಕೊಡುವಾಗ ಯಾರು ಯಾರು ಹಾಜರಿದ್ದರು? ಎಂದರೆ ನಾನು, ಹನುಮಂತಪ್ಪ, ನಿಂಗಪ್ಪ ಮತ್ತು ಪತ್ರ ಬರಹಗಾರ ಲಿಂಗಪ್ಪ ಹಾಜರಿದ್ದೆವು. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆ ದಿನ ವಾದಿ, ಪ್ರತಿವಾದಿ ಮತ್ತು ಈ ಮೇಲೆ ಹೇಳಿದ ನಾಲ್ಕು ಜನ ಸೇರಿ ಆರು ಜನ ಹಾಜರಿದ್ದೆವು. ಪ್ರತಿವಾದಿಯು ರೂ. 5 ಲಕ್ಷ ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ರೂ. 1 ಲಕ್ಷ ಕೊಡುತ್ತೇನೆಂದು ಹೇಳಿ ಸದರಿ ಮೊತ್ತವನ್ನು ಪ್ರತಿವಾದಿಗೆ ಕೊಟ್ಟಿದ್ದು, ನಾನು ಪ್ರತಿವಾದಿಯಿಂದ ರೂ. 5 ಲಕ್ಷ ಕೊಟ್ಟಂತೆ ಕರಾರು ಬರೆಯಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಇನಾಂ ಜಮೀನು ಆಗಿರುವ ಕಾರಣ ದಾವಾ ಸ್ವತ್ತು ಸರ್ಕಾರದ ಆಸ್ತಿಯಾಗಿದ್ದು ಪ್ರತಿವಾದಿಗೆ ಕರಾರು ಬರೆದುಕೊಡಲು ಹಾಗೂ ವಾದಿಗೆ ಕರಾರು ಬರೆಯಿಸಿಕೊಳ್ಳಲು ಹಕ್ಕು ಇಲ್ಲ ಎಂದರೆ ಆ ವಿಚಾರದ ಬಗ್ಗೆ ಪ್ರತಿವಾದಿಗೇ ಗೊತ್ತಿರುತ್ತದೆ. ಇನಾಂ

ಜಮೀನು ಆಗಿರುವ ಕಾರಣ ಮಾರಾಟ ಮಾಡಲು ಅವಕಾಶವಿರದಿದ್ದರಿಂದ ಸಾಲದ ಭದ್ರತೆಗಾಗಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ರೂ. 1 ಲಕ್ಷ ಸಾಲ ಪಡೆದು ಅದಕ್ಕೆ ಸಾಲಿಯಾನ ಶೇಕಡ 6 ರ ಬಡ್ಡಿಯೊಂದಿಗೆ ಸಾಲವನ್ನು ವಾಪಸ್ಸು ಮಾಡಲು ಈಗಲೂ ಸಿದ್ಧನಾಗಿದ್ದಾನೆ ಎಂದರೆ ಅದರ ಬಗ್ಗೆ ವಾದಿಗೆ ಗೊತ್ತು. ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಹೊಂದಿರಲಿಲ್ಲ ಮತ್ತು ಮಾರಾಟ ಮಾಡಲು ಒಪ್ಪಿ ಕರಾರು ಕೂಡ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಾನು ವಿಶ್ವಾಸಿಕನಾದ ಕಾರಣದಿಂದ ರೂ. 1 ಲಕ್ಷ ಸಾಲಕ್ಕೆ ಕೊಟ್ಟ ಹಣವನ್ನು ರೂ. 5 ಲಕ್ಷ ಕ್ರಯದ ಮುಂಗಡ ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.